ರಾಜ್ಯದಲ್ಲಿ ಮಂಡಲ ಗ್ರಂಥಾಲಯಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿ

496(858) -ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಮಂಡಳ ಕೇಂದ್ರ ಗ್ರಂಥಾಲಯಗಳು ಇರುತ್ತವೆ; ಅವುಗಳಲ್ಲಿ ಎಷ್ಟು ಗ್ರಂಥಾಲಯದಲ್ಲಿ ಮೇಲ್ವಿಚಾರಕರ ಹುದ್ದೆಗಳು ಖಾಲಿ ಇರುತ್ತವೆ; ಅವುಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ 2751 ಗ್ರಾಮ ಪಂಚಾಯತ್ ಗ್ರಂಥಾಲಯಗಳು ಇರುತ್ತವೆ. ಅವುಗಳಲ್ಲಿ 42 ಗ್ರಂಥಾಲಯಗಳಲ್ಲಿ ಮೇಲ್ವಿಚಾರಕರ ಹುದ್ದೆಗಳು ಖಾಲಿ ಇರುತ್ತದೆ. ಸ್ಥಳೀಯವಾಗಿ, ಮಂಡಳ ಕೇಂದ್ರಗಳಿಂದ ಅರ್ಹ ಅಭ್ಯರ್ಥಿಯ ತಯ್ಯೆ ಪಟ್ಟಿಯನ್ನು ಪಡೆದು, ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುತ್ತಿದೆ.

ರಾಜ್ಯದಲ್ಲಿ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಮಧ್ಯಾಹ್ನದ ಊಟ

497(859) - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : (ಪ್ರಾಥಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಕನ್ನಡ ಬಾಲಕರ ಶಾಲೆಗಳಲ್ಲಿ ಮಧ್ಯಾಹ್ನದ ಊಟಕ್ಕಾಗಿ ಎಷ್ಟು ಹಣವನ್ನು ತೆಗೆದಿರಿಸಲಾಗಿದೆ?

ಆ) ಈ ಯೋಜನೆ ಈಗ ಯಾವ ಯಾವ ತಾಲ್ಲೂಕುಗಳಲ್ಲಿ ಪ್ರಾರಂಭವಾಗಿರುತ್ತದೆ?

ಇ) ಪೂರ್ವ ಸಿದ್ಧತೆ ಮಾಡದೇ ಇರುವುದರಿಂದ ಈ ಯೋಜನೆ ನಿಷ್ಕ್ರಿಯವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಖಾಸಗಿ ಕನ್ನಡ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಈ ಯೋಜನೆಯಿಂದ ಅನ್ಯಾಯವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ವಿದ್ಯಾರ್ಥಿಗಳಲ್ಲಿ ತಾರತಮ್ಯವನ್ನು ಹೋಗಲಾಡಿಸುವ ದೃಷ್ಟಿಯಿಂದ ಖಾಸಗಿ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಈ ಯೋಜನೆಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದೆ?

ಪ್ರೊ ಬಿ.ಕೆ. ಚಂದ್ರಶೇಖರ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಸರ್ಕಾರಿ ಕನ್ನಡ ಬಾಲಕರ ಶಾಲೆಗೆಂದು ಮಧ್ಯಾಹ್ನದ ಊಟಕ್ಕಾಗಿ ಪ್ರತ್ಯೇಕ ಹಣ ಕಾಯ್ದಿರಿಸಿರುವುದಿಲ್ಲ. ಬದಲಾಗಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದಾಖಲಾಗಿರುವ ಎಲ್ಲಾ

ಭಾಷಾ ಮಕ್ಕಳಿಗೂ ಈ ಯೋಜನೆಯು ಅನ್ವಯಿಸುತ್ತದೆ. ಈ ಯೋಜನೆಗಾಗಿ 2001-02ರಲ್ಲಿ ರೂ. 15.00 ಕೋಟಿ ಮತ್ತು 2002 -03 ರಲ್ಲಿ ರೂ. 45.00 ಕೋಟಿಗಳನ್ನು ಮೀಸಲಿಡಲಾಗಿದೆ.

ಅ) ರಾಜ್ಯದ ಈಶಾನ್ಯ ಭಾಗದ 7 ಜಿಲ್ಲೆಗಳ ಪೈಕಿ ರಾಯಚೂರಿನಲ್ಲಿ 05 ತಾಲ್ಲೂಕುಗಳು, ಬಿಜಾಪುರದಲ್ಲಿ 06 ತಾಲ್ಲೂಕುಗಳಲ್ಲಿ, ಬಾಗಲಕೋಟೆಯಲ್ಲಿ 06 ತಾಲ್ಲೂಕುಗಳಲ್ಲಿ, ಬಳ್ಳಾರಿಯ 07 ತಾಲ್ಲೂಕುಗಳಲ್ಲಿ, ಬೀದರ್‌ನ 05 ತಾಲ್ಲೂಕುಗಳಲ್ಲಿ, ಕೊಪ್ಪಳದ 04 ತಾಲ್ಲೂಕುಗಳಲ್ಲಿ ಹಾಗೂ ಗುಲ್ಬರ್ಗಾದ 06 ತಾಲ್ಲೂಕುಗಳಲ್ಲಿ ಬಿಸಿ ಊಟದ ಕಾರ್ಯಕ್ರಮವು ಪ್ರಾರಂಭವಾಗಿರುತ್ತದೆ.

ಆ) ಇಲ್ಲ.

ಈ) ಹೌದು.

ಉ) ಇಲ್ಲ.

ರಾಜ್ಯದ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಲೆಕ್ಕಶೀರ್ಷಿಕೆ ವರ್ಗಾವಣೆ

498(792) -ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಅನುದಾನಗಳನ್ನು ಒಂದು ಲೆಕ್ಕಶೀರ್ಷಿಕೆಯಿಂದ ಮತ್ತೊಂದು ಲೆಕ್ಕಶೀರ್ಷಿಕೆಗೆ ಸರ್ಕಾರದ ಅನುಮತಿ ಇಲ್ಲದೆಯೇ ವರ್ಗಾವಣೆ ಮಾಡಲಾಗಿದೆ; ವರ್ಗಾವಣೆ ಮಾಡಲು ಕಾರಣ ಏನು; ವಿವರ ನೀಡುವುದು;

ಆ) ಸರ್ಕಾರ ಬಿಡುಗಡೆಗೊಳಿಸಿದ ಅನುದಾನಕ್ಕಿಂತ ಹೆಚ್ಚಿನ ಹಣವನ್ನು ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯಲ್ಲಿ ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮ ಏನು; ಯಾವ ಯಾವ ಜಿಲ್ಲಾ ಪಂಚಾಯಿತಿಯಲ್ಲಿ ಯಾರ ಯಾರ ಮೇಲೆ ಕ್ರಮಕೈಗೊಳ್ಳಲಾಗಿದೆ ತಿಳಿಸುವುದು; ಅಧಿಕಾರಿಗಳ ಪದನಾಮ ಸಹಿತ ವಿವರ ನೀಡುವುದು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ಯ ಸಚಿವರು):

ಅ) ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಸೆಕ್ಷನ್ 257 (ಎ) ದನ್ವಯ, ಆರ್ಥಿಕ ವರ್ಷದಲ್ಲಿ, ಜಿಲ್ಲಾ ಪಂಚಾಯತಿಯು, ಜಮೆಗಳ ಬಗ್ಗೆ ಅಥವಾ ಅದು ಕೈಗೊಳ್ಳುವ ವಿವಿಧ ಸೇವೆಗಳ ಬಗ್ಗೆ ವೆಚ್ಚ ಮಾಡಬೇಕಾದ ಮೊಬಲಗುಗಳ ಹಂಚಿಕೆಯ ಬಗ್ಗೆ, ಬಜೆಟ್‌ನಲ್ಲಿ ಮಾಡಿದ ಏರ್ಪಾಡುಗಳನ್ನು ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದರೆ ಅದು ಜಿಲ್ಲಾ ಪಂಚಾಯ್ತಿಯ ಯಾವುದೇ ಅಭಿವೃದ್ಧಿ ಕಾರ್ಯಗಳಿಗಾಗಿ ಅನುಮೋದಿಸಿದ ಅನುದಾನಗಳಲ್ಲಿ ಶೇಕಡ 10 ರವರೆಗೆ ಅಂಥಹ ಮಾರ್ಪಾಡನ್ನು ಮಾಡಬಹುದಾಗಿದೆ. ಶೇಕಡ 10ಕ್ಕಿಂತ ಹೆಚ್ಚಿನ ಮಾರ್ಪಾಡಿಗೆ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ. ಅದರನ್ವಯ 2001-02 ನೇ ಸಾಲಿನಲ್ಲಿ ಕೆಲವೊಂದು ಲೆಕ್ಕಶೀರ್ಷಿಕೆಗಳಡಿಯ ಹೆಚ್ಚುವರಿ ಬೇಡಿಕೆಯನ್ನು ಭರಿಸಲು ಕೆಳಕಾಣಿಸಿದ 11 ಜಿಲ್ಲಾ ಪಂಚಾಯತ್‌ಗಳು ಶೇಕಡ 10ಕ್ಕಿಂತ ಹೆಚ್ಚಿನ ಮಾರ್ಪಾಡುಗಳಿಗೆ ಸರ್ಕಾರದ (ಆರ್ಥಿಕ ಇಲಾಕೆಯ) ಅನುಮೋದನೆಯನ್ನು ಪಡೆದಿರುತ್ತವೆ.